**ಇಂದು ದಿನಾಂಕ:*03.12.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : 1 ರಿಂದ 4 ರವರ ಪ್ರತಿವಾದಿ ಪರ ಶ್ರೀ.ಎ.ಜಿ.ಪಿ.ವಕೀಲರಿಂದಃ</u>**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ನಾನು ಮೂಲತಃ ಕೃಷಿಕ ಕುಟುಂಬದವನು. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಾಯಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ದಾವಾ ಸರ್ವೆ ನಂಬರ್ ಗೆ ಹೊಂದಿಕೊಂಡಂತೆ ನಮಗೆ ಪಿತ್ರಾರ್ಜಿತ ಆಸ್ತಿ ಇದೆ. ನಾವು ದೊಡ್ಡಹಿಡುವಳಿದಾರರೆಂದು ಪರಿಗಣಿಸಿ ನಮ್ಮ ತಾಯಿ ಭೂನ್ಯಾಯಮಂಡಳಿಗೆ ಕೊಟ್ಟಿದ್ದ ಅರ್ಜಿಯನ್ನು ಜಿಲ್ಲಾಧಿಕಾರಿಯವರು ವಿಲೆ ಮಾಡಿದ್ದಾರೆ ಎಂದರೆ ಸುಳ್ಳು. ಜಿಲ್ಲಾಧಿಕಾರಿಯವರು ಅರ್ಜಿ ವಿಲೆ ಮಾಡಿದ ನಂತರವೂ ಅಕ್ರಮವಾಗಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ.

ನಾವು ದೊಡ್ಡಹಿಡುವಳಿದಾರರಾಗಿರುವುದರಿಂದ ದಾವಾ ಆಸ್ತಿಯನ್ನು ನಮಗೆ ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ಕಾರದ ಉದ್ದೇಶಕ್ಕಾಗಿ ಮೀಸಲಿರುವುದರಿಂದ ನಮಗೆ ಮಂಜೂರು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**